ಓ.ಎಸ್. ನಂ. 68/2018

ಪಿ.ಡಬ್ಲ್ಯು: 02 (ಹನುಮಂತಪ್ಪ)

ದಿನಾಂಕಃ 01.02.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ – Smt. AGP ವಕೀಲರಿಂದ.

ನಾನು ಕುದುರೆಡವು ಗ್ರಾಮದವನು. ಈ ದಾವೆಯನ್ನು ವಾದಿ ಹೂಡಿರುತ್ತಾರೆ. ದಾವೆಯನ್ನು ಹೊಲದ ಬಗ್ಗೆ ಹೂಡಿರುತ್ತಾರೆ. ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿದೆ. ನನಗೆ ಇಂಗ್ಲೀಷ್ ಓದಲು ಬರೆಯಲು ಬರುವುದಿಲ್ಲ. 3 ನೇ ವಾದಿ ಬಸವರಾಜ ನನ್ನ ಜೊತೆಗಾರ. ಆತ ಹೇಳಿದ ಕಾರಣ ನಾನು ಪ್ರಮಾಣ ಪತ್ರಕ್ಕೆ ಸಹಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ದಾವೆಯನ್ನು ಯಾವ ಕಾರಣಕ್ಕೆ ಹೂಡಲಾಗಿದೆ ಎಂದು ನನಗೆ ಗೊತ್ತಿಲ್ಲ. ನಾನು ನನ್ನ ಪ್ರಮಾಣ ಪತ್ರಕ್ಕೆ ತಿಳಿದುಕೊಳ್ಳದೇ ಸಹಿ ಮಾಡಿದ್ದೇನೆ ಎಂದರೆ ಹೌದು. ನಮ್ಮ ಗ್ರಾಮದಲ್ಲಿ ಹರಿಜನ ಕಾಲೋನಿ ಎಂದು ಇದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಬರ್ 153 ಎಂ/2 ರಲ್ಲಿ ಗ್ರಾಮ ನತ್ತಾ ಹರಿಜನ ಕಾಲೋನಿ ಎಂದು ಇದೆ ಎಂದರೆ ಹೌದು.

1968-69 ರಿಂದ ಪಹಣಿಗಳಲ್ಲಿ ಹರಿಜನ ಕಾಲೋನಿ ಎಂದು ಇದೆ ಎಂದರೆ ನನಗೆ ಗೊತ್ತಿಲ್ಲ. ಹರಿಜನ ಕಾಲೋನಿಯಲ್ಲಿ 10-20 ಮನೆಗಳು ಹಾಗೂ ದುರ್ಗಮ್ಮ ಗುಡಿ ಇದೆ ಎಂದರೆ ಹೌದು. ಸುಮಾರು 60 ವರ್ಷಗಳಿಂದ ಸರ್ವೆ ನಂಬರ್ 153 ಎಂ/2 ರಲ್ಲಿ ಜನರು ವಾಸಿಸುತ್ತಿದ್ದಾರೆ ಎಂದರೆ ಹೌದು. ನನಗೆ ಈ ದಾವೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಹೌದು. ಸರ್ವೆ ನಂಬರ್ 153 ಎಂ/2 ರ ಉಪ ವಿಭಾಗದ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಹೌದು. ನನಗೆ ಈ ದಾವೆಯಲ್ಲಿ ಹೇಳಿರುವ ಬಾವಿಯ ಬಗ್ಗೆ ಹೇಳಲು ಬರುವುದಿಲ್ಲ ನನಗೆ ಅದರ ಬಗ್ಗೆ ಗೊತ್ತು, ಅದು ಯಾವ ಸರ್ವೆ ನಂಬರಿನಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂಬರ್ 153 ಎಂ ರಲ್ಲಿ ಬಾವಿ ಇದೆ ಎಂದರೆ ಹೌದು. ನನಗೆ ದಾವೆಯ ಬಗ್ಗೆ ಏನು ಗೊತ್ತಿಲ್ಲ ಎಂದರೆ ಹೌದು.

ಪಾಟೀ ಸವಾಲು ಮುಕ್ತಾಯ.

ಮರು ವಿಚಾರಣೆ ಇಲ್ಲ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.